ಹೇಳಿದರು. ನಾನು ಕೇಳುವುದು ಹಿಂದಿನ ವರ್ಷದ ಸಬ್ಸಿಡಿ ಬಾಕಿ ಉಳಿದಿದ್ದರೆ ಅದನ್ನು ಮುಂದಿನ ವರ್ಷ ಬಜೆಟ್ ತಯಾರಿಕೆ ಹಂತದಲ್ಲೇ ಯಾಕೇ ಸೇರಿಸಿಕೊಳ್ಳಲಿಲ್ಲ? ಉದಾಹರಣೆಗೆ 96-97ರ ಬಾಕಿ 134.97 ಕೋಟಿ ರೂ.ಗಳಿದ್ದು, 97-98ರ ಆಯವ್ಯಯ ರಚಿಸುವಾಗ ಈ ಹಣವನ್ನೂ ಸೇರಿಸಿ ಏಕೆ ನೀವು ಫಿಗರ್‌ಗೆ ಅರೈವ್ ಆಗಲಿಲ್ಲ? ಕೆಲವು ಸಣ್ಣ ಉದ್ದಿಮೆದಾರರಿಗೆ ಮೂರ್ನಾಲ್ಕು ವರ್ಷಗಳಿಂದ ಸಬ್ಸಿಡಿ ಹಣ ತಲುಪಿಲ್ಲ, ಎಷ್ಟೋ ಉದ್ದಿಮೆದಾರರಿಗೆ ಬ್ಯಾಂಕ್‌ಗಳಲ್ಲಿ ತೆಗೆದ ಸಾಲಕ್ಕೆ ಬಡ್ಡಿ ಕಟ್ಟಲೂ ಆಗುತ್ತಿಲ್ಲ. ನಿಮ್ಮ ಬಜೆಟ್ ತಯಾರಿಕೆಯಲ್ಲಿ ದೋಷವಿದೆ ಅಂತ ನಾನು ಆರೋಪಿಸುತ್ತೇನೆ.

ಶ್ರೀ ಬಿ.ಎ. ಮೊಯಿದ್ದೀನ್ : ನಾನು ಆಗಲೇ ಹೇಳಿದೆ ಸಾಲದ ಪ್ರಮಾಣದಲ್ಲಿ ಹೈಕ್ ಆಗಿದೆ, ಇಂಡಸ್ಟ್ರೀಗಳೂ ಬಹಳ ಬಂದವು. ಅದರಿಂದ ಬಾಕಿ ಉಳಿಯಿತು. ಆದರೆ ಐದಾರು ವರ್ಷಗಳ ಹಿಂದಿನ ಪ್ರಮಾಣಕ್ಕೆ ಹೋಲಿಸಿದರೆ ಈಗ ಕಡಿಮೆಯಾಗಿದೆ. ಈಗ ಯಾವ ಇಂಡಸ್ಟ್ರೀ ಬರಬೇಕಾದರೂ ಸಬ್ಸಿಡಿ ಕೇಳುವ ಮಟ್ಟಕ್ಕೆ ಬಂದುಬಿಟ್ಟಿದೆ. ಇದರ ಬಗ್ಗೆ ಮರುಚಿಂತನೆ ಮಾಡುವ ಕಾಲ ಸನ್ನಿಹಿತವಾಗಿದೆ ಆದಷ್ಟು ಬೇಗನೆ ಸಬ್ಸಿಡಿ ಬಾಕಿ ಪಾವತಿ ಮಾಡುತ್ತೇವೆಂದು ಭರವಸೆ ಕೊಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ : ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು ಎಷ್ಟು ಬಾಕಿ ಇದೆ?

ಶ್ರೀ ಬಿ.ಎ. ಮೊಯಿದ್ದೀನ್ : ಒಟ್ಟು ನನಗೆ ಗೊತ್ತಿರುವ ಹಾಗೆ 20ಕೋಟಿ ರೂ.ಗಳ ಬಾಕಿ ಇದೆ.

ದೊಡ್ಡಬಳ್ಳಾಪುರ ನಗರಕ್ಕೆ ಒಳಚರಂಡಿ ವ್ಯವಸ್ಥೆ

424 - ಶ್ರೀ ಆರ್.ಜಿ. ವೆಂಕಟಾಚಲಯ್ಯ (ದೊಡ್ಡಬಳ್ಳಾಪುರ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1998-99ನೇ ಸಾಲಿನಲ್ಲಿ ದೊಡ್ಡ ಬಳ್ಳಾಪುರ ನಗರಕ್ಕೆ ಒಳಚರಂಡಿ ವ್ಯವಸ್ಥೆ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?*

ಆ) *ಹಾಗಿದ್ದಲ್ಲಿ ಸದರಿ ಕೆಲಸವನ್ನು ಯಾವಾಗ ಕೈಗೆತ್ತಿಕೊಳ್ಳಲಾಗುವುದು?*

ಇ) *ಈ ಬಗ್ಗೆ ತಗಲಬಹುದಾದ ಅಂದಾಜು ವೆಚ್ಚ ಎಷ್ಟು?*

ಶ್ರೀ ಬಿ.ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು) :

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಆರ್.ಜಿ. ವೆಂಕಟಾಚಲಯ್ಯ : ಅಧ್ಯಕ್ಷರೇ, ನನ್ನ ಮತಕ್ಷೇತ್ರ ದೊಡ್ಡಬಳ್ಳಾಪುರ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆ ಮಾಡಿಕೊಡಬೇಕೆಂದು ನಾನು ಸಚಿವರಲ್ಲಿ ಪ್ರಶ್ನೆ ಮಾಡಿದ್ದುದು ಹಿಂದೆಯೂ ಈ ಬಗ್ಗೆ ನಾನು ಸಚಿವರಲ್ಲಿ ಬಿನ್ನವಿಸಿಕೊಂಡಿದ್ದಾಗ ಈ ವರ್ಷದ ಬಜೆಟ್‌ನಲ್ಲಿ ಇದನ್ನು ಸೇರಿಸುವುದಾಗಿ

ಭರವಸೆ ಕೊಟ್ಟಿದ್ದರು. ರೇಷ್ಮೆ ನಗರವಾದ ದೊಡ್ಡಬಳ್ಳಾಪುರದಲ್ಲಿ 65 ಸಾವಿರ ಜನಸಂಖ್ಯೆ ಇದ್ದು 12 ಸಾವಿರ ಮಗ್ಗಗಳಿವೆ, 400 ಬಣ್ಣ ಹಾಕುವ ಕಾರ್ಖಾನೆಗಳಿವೆ. ಈ ಕೊಳಕು ನೀರೆಲ್ಲಾ ಪುರಾತನ ಕಾಲದ ಮೋರಿಚರಂಡಿಗಳಲ್ಲಿ ಶೇಖರಗೊಂಡು ಪಟ್ಟಣದಲ್ಲಿ ದುರ್ವಾಸನೆ ಅನಾರೋಗ್ಯಕರ ರೋಗಗಳಿಗೆಲ್ಲ ಕಾರಣವಾಗಿದೆ. ಆದ್ದರಿಂದ ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ದಯವಿಟ್ಟು ಅವರು ಈ ಕೆಲಸ ಮಾಡಿಕೊಡಬೇಕು. ಅವರು ಖಾಯಂ ನೀರು ಪೂರೈಕೆ ಮಾಡುವುದಾಗಿ ಸುಮಾರು 60 ಲಕ್ಷ ರೂ.ಗಳ ಒಂದು ಯೋಜನೆಯ ಬಗ್ಗೆಯೂ ಹೇಳಿದರು. ದುರ್ದೈವದಿಂದ ಅದನ್ನು ಕೈಬಿಟ್ಟಿದ್ದಾರೆ.

ಶ್ರೀ ಬಿ.ಎನ್. ಬಚ್ಚೇಗೌಡ : ಅಧ್ಯಕ್ಷರೇ, ದೊಡ್ಡಬಳ್ಳಾಪುರಕ್ಕೆ ನೀರು ಪೂರೈಕೆಯದೇ ಸಮಸ್ಯೆಯಾಗಿದೆ, ಏಕೆಂದರೆ ಅಲ್ಲಿ ಯಾವ ಪೆರೆನಿಯಲ್ ಸೋರ್ಸ್ ಸಹ ಇಲ್ಲ. ಹಾಲಿ ಆವರೇಜ್ 20 ಲೀಟರ್ ನೀರು ಪ್ರತಿ ವ್ಯಕ್ತಿಗೆ ಸಿಗುವ ಪ್ರಮಾಣದಲ್ಲಿ ಬೋರ್‌ವೆಲ್‌ಗಳು ನೀರೊದಗಿಸುತ್ತಿವೆ. ರಿಮೋರ್ಟ್ ಸೆನ್ಸಿಂಗ್ ತಂತ್ರದ ಮೂಲಕ ಟೆಸ್ಟ್ ಮಾಡಿಸಿ ಹೈಪ್ರೆಷರ್ ಬೋರ್‌ವೆಲ್ ಕೊರೆಸಿ ಹೆಚ್ಚು ಆಳಕ್ಕೆ ಹೋಗಿ ಅಲ್ಲಿಂದ ನೀರು ತೆಗೆದು ತಲಾ ವ್ಯಕ್ತಿಗೆ 65 ರಿಂದ 100 ಲೀಟರ್ ನೀರೊದಗಿಸುವ ಶಾಶ್ವತ ಪರಿಹಾರ ಒದಗಿಸುವ ಕೆಲಸ ಮಾಡಬೇಕೆಂದು ಯೋಚಿಸುತ್ತಿದ್ದೇವೆ. ಅದು ಬಿಟ್ಟು ಪುರಸಭೆಯೇ ಈ ಕೆಲಸ ಮಾಡಬೇಕೆಂದು ನಾವು ವಹಿಸಿದರೆ ಅವರ ಕೈಯಲ್ಲಿ ಸಾಧ್ಯವಾಗುವುದಿಲ್ಲವೆಂದು ನನಗೆ ಗೊತ್ತಿದೆ. ಆದ್ದರಿಂದ ಸರ್ಕಾರವೇ ಪೂರ್ತಿ ಈ ಯೋಜನೆಯನ್ನು ವಹಿಸಿಕೊಳ್ಳಬೇಕೆಂದು ತೀರ್ಮಾನಿಸಿದೆ.

ಅಧ್ಯಕ್ಷರು : ಆದರ ಜೊತೆಗೆ ಶ್ರೀನಿವಾಸಪುರ ಪಟ್ಟಣವನ್ನೂ ಸೇರಿಸಿಕೊಳ್ಳಿ.

ಶ್ರೀ ಬಿ.ಎನ್. ಬಚ್ಚೇಗೌಡ : ಶ್ರೀನಿವಾಸಪುರದ ಜೊತೆಗೆ ನೆಲಮಂಗಲ ಕೊಟ್ಟೂರು ಪಟ್ಟಣಗಳೂ ನಗರ ನೀರು ಪೂರೈಕೆ ಯೋಜನೆಗೆ ಬರುತ್ತದೆ, ಮಾಡಿಕೊಡುತ್ತೇನೆ.

ಅಧ್ಯಕ್ಷರು : ಆಯಿತು, ಮುಂದಿನ ಪ್ರಶ್ನೆ ಶ್ರೀ ವಾಟಾಳ್ ನಾಗರಾಜ್ ಅವರದ್ದು, ತಮ್ಮ ಪ್ರಶ್ನೆಗೆ ಉತ್ತರಿಸಲು ಸ್ವಲ್ಪ ಸಮಯ ಕೇಳಿದ್ದಾರೆ. ಅನಂತರ ತೆಗೆದುಕೊಳ್ಳೋಣ.

ಶ್ರೀ ವಾಟಾಳ್ ನಾಗರಾಜ್ : ಈ ಪ್ರಶ್ನೆಯನ್ನು ಯಾವಾಗ ತೆಗೆದುಕೊಳ್ಳುತ್ತೀರಿ ಎಂದಾದರೂ ಹೇಳಿ.

ಶ್ರೀ ಬಿ. ಸೋಮಶೇಖರ್ : ಅದಕ್ಕೆ ಟೈಂ ಕೇಳಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ಇನ್ನು ಎರಡು ದಿವಸ ಮಾತ್ರ ಉಳಿದಿದೆ.

ಅಧ್ಯಕ್ಷರು : ಮುಂದಿನ ಅಧಿವೇಶನದಲ್ಲಿ ತೆಗೆದುಕೊಳ್ಳೋಣ.

ಶ್ರೀ ವಾಟಾಳ್ ನಾಗರಾಜ್ : ಈ ಪ್ರಶ್ನೆ ಸ್ಮಶಾನದ ಬಗ್ಗೆ ಕೇಳಿರುವುದು.

ಶ್ರೀ ಬಿ. ಸೋಮಶೇಖರ್ : ನಿಮ್ಮ ಕಳಕಳಿಯನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ತಾವು ಪ್ರಶ್ನೆಯನ್ನು ಎಷ್ಟು ಸೀರಿಯಸ್ ಆಗಿ ಕೇಳಿದ್ದೀರೋ ಅಷ್ಟೇ ಕಳಕಳಿಯನ್ನು ನಾನು ಇಟ್ಟುಕೊಂಡಿದ್ದೇನೆ. ಅದರ ಬಗ್ಗೆ ಏನೂ ಅನುಮಾನವನ್ನು ಇಟ್ಟುಕೊಳ್ಳಬೇಕಾಗಿಲ್ಲ. ನಾನು ಆಡಳಿತಾತ್ಮಕವಾದ ಕ್ರಮವನ್ನು ತೆಗೆದುಕೊಂಡು ನಿಮಗೆ ತಿಳಿಸುತ್ತೇನೆ.

ಅಧ್ಯಕ್ಷರು : ಮಂಜುನಾಥ್ ಸಿ. ಕುನ್ನೂರ್‌ರವರ ಪ್ರಶ್ನೆಗೂ ಸರ್ಕಾರ ಸಮಯವನ್ನು ಕೇಳಿದೆ.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ನಿವೇಶನಗಳ ಹಂಚಿಕೆ

427 - ಶ್ರೀ ಎ. ರಾಮದಾಸ್ (ಕೃಷ್ಣರಾಜ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಕಳೆದ ಎರಡು ವರ್ಷಗಳಲ್ಲಿ ಎಷ್ಟು ನಿವೇಶನ ಹಂಚಿದೆ?

ಆ) ಫಲಾನುಭವಿಗಳ ಆಯ್ಕೆಯಲ್ಲಿ ದೋಷನಿವಾರಣೆಗೆ ಶೇಕಡ 2 ನಿವೇಶನಗಳನ್ನು ಮಂಜೂರು ಮಾಡಲು ಅವಕಾಶವಿದೆಯೇ?

ಇ) ಈ ಶೇಕಡ 2ರ ಫಲಾನುಭವಿಗಳ ಆಯ್ಕೆಯನ್ನು ದೋಷಪೂರ್ವಕವಾಗಿ ಸ್ವಜನ ಪಕ್ಷಪಾತದಿಂದ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಬಿ.ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು) :

ಅ) ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಕಳೆದ ಎರಡು ವರ್ಷಗಳಿಂದ 622 ವಿವಿಧ ಅಳತೆಯ ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ.

ಆ) ನಿವೇಶನಗಳ ನಿಯಾಮಾವಳಿ 1991ರ 13(2)ರ ಪ್ರಕಾರ ವಿವಿಧ ವರ್ಗದವರಿಗೆ ನಿವೇಶನ ಹಂಚಿಕೆಗೆ ಶೇಕಡ 98ಕ್ಕೆ ಪ್ರಸ್ತಾವನೆ ಇದೆ. ಬಾಕಿ ಶೇಕಡ 2ರ ನಿವೇಶನಗಳನ್ನು ನಿವೇಶನದ ಹಂಚಿಕೆಯಲ್ಲಿ ಅರ್ಹತೆ ಇದ್ದು ನಿವೇಶನ ಪಡೆಯುವಲ್ಲಿ ವಂಚಿತರಾದವರಿಗೆ ಹಂಚಿಕೆಗೆ ಕ್ರಮ ಕೈಗೊಳ್ಳಲಾಗಿರುತ್ತದೆ.

ಇ) ಮೇಲ್ಕಂಡ ಫಲಾನುಭವಿಗಳ ಆಯ್ಕೆಯಲ್ಲಿ ಯಾವುದೇ ದೋಷ ಉಂಟಾಗಿರುವುದಿಲ್ಲ ಮತ್ತು ಯಾವುದೇ ರೀತಿಯ ಸ್ವಜನಪಕ್ಷಪಾತ ಆಗಿರುವುದಿಲ್ಲ ಅರ್ಹತೆ ಇದ್ದ ಫಲಾನುಭವಿಗಳಿಗೆ ಮಾತ್ರ ಮಂಜೂರಾತಿ ನೀಡಲಾಗಿದೆ.

ಈ) ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : (ಶ್ರೀ ರಾಮ್‌ದಾಸ್‌ರವರ ಪರವಾಗಿ) ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಯಾವ ರೂಪರೇಷೆ ಯೋಜನೆಗಳನ್ನು ಹಾಕಿಕೊಂಡು ಪ್ರಶ್ನೆ ಕೇಳಿದ್ದರೋ ನನಗೆ ಗೊತ್ತಿಲ್ಲ. ಸರ್ಕಾರಿ ನಿವೇಶನವನ್ನು ಸರಿಯಾಗಿ ಹಂಚಿಕೆ ಮಾಡಿದ್ದೇವೆ ಎಂದು ತಮ್ಮ ಉತ್ತರದಲ್ಲಿ ಹೇಳಿದ್ದೀರಿ. ಅವಕ್ಕಾಗಿ ನಾನು ತುಂಬಾ ಅಭಾರಿಯಾಗಿದ್ದೇನೆ ಎಂದು ಹೇಳಿ ಕುಳಿತುಕೊಳ್ಳುತ್ತೇನೆ.